ಮೈಸೂರು ವಿಶ್ವವಿದ್ಯಾನಿಲಯ

ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್ ಮೈಸೂರು

ಡಾ. ಸಿ ವೆಂಕಟೇಶ್
ನಿರ್ದೇಶಕರು.

dir.deptofphyedn@gmail.com
Ph. No : 0821-2419288

## ಪ್ರಕಟಣೆ ಕೃಪೆಗಾಗಿ

ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಮೈಸೂರು ನಗರ ಯುವ ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸಲು 2025 ನೇ ಸಾಲಿನ ವಿವಿಧ ಕ್ರೀಡೆಗಳ 30ನೇ ಬೇಸಿಗೆ ತರಬೇತಿ ಶಿಬಿರವನ್ನು ನುರಿತ ತರಬೇತುದಾರರಿಂದ 07 ವರ್ಷದಿಂದ 18 ವರ್ಷದ ವರೆಗಿನ ಮಕ್ಕಳಿಗೆ ದಿನಾಂಕ: 02.04.2025 ರಿಂದ 02.05.2025ರ ವರೆಗೆ ಅಥ್ಲೆಟಿಕ್ಸ್, ಷಟಲ್ ಬ್ಯಾಡ್ಮಿಂಟನ್, ಕ್ರಿಕೆಟ್, ಫುಟ್ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಕಬಡ್ಡಿ, ವಾಲಿಬಾಲ್, ಕುಸ್ತಿ, ಯೋಗ, ಕಿಕ್ ಬಾಕ್ಸಿಂಗ್, ಕರಾಟೆ ಮತ್ತು ಫೆನ್ಸಿಂಗ್ ಕ್ರೀಡೆಗಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಈ ಶಿಬಿರದಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ದಿನಾಂಕ: 15.03.2025 ರಿಂದ ದೈಹಿಕ ಶಿಕ್ಷಣ ವಿಭಾಗದ ಕಛೇರಿ ವೇಳೆಯಲ್ಲಿ ಅರ್ಜಿಗಳನ್ನು ಪಡೆದು ನಿಗಧಿತ ಶುಲ್ಕವನ್ನು ಪಾವತಿಸಿ ನೊಂದಣಿ ಮಾಡಿಕೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ. (ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: **0821-2419288** ಸಂಪರ್ಕಿಸುವುದು).

## ಈಜು ತರಬೇತಿ ಶಿಬಿರ

ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಈಜು ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಎರಡು ಪ್ರತ್ಯೇಕ ಶಿಬಿರಗಳನ್ನು ಆಯೋಜಿಸುತ್ತಿದ್ದು, ಮೊದಲನೇ ಶಿಬಿರ ದಿನಾಂಕ: 25.03.2025 ರಿಂದ 22.04.2025 ವರೆಗೆ ಹಾಗೂ ಎರಡನೇ ಶಿಬಿರ ದಿನಾಂಕ: 24.04.2025 ರಿಂದ 20.05.2025ರ ವರೆಗೆ 07 ವರ್ಷಕ್ಕೂ ಮೇಲ್ಪಟ್ಟ ಬಾಲಕ/ಬಾಲಕಿಯರಿಗೆ ಮತ್ತು ಪುರುಷ/ಮಹಿಳೆಯರಿಗೆ ವಿಶೇಷ ಈಜು ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿದೆ. ಈಜು ತರಬೇತಿ ಶಿಬಿರದ ಅರ್ಜಿಯನ್ನು ಈಜುಕೊಳದಲ್ಲಿ ಪಡೆದು ನಿಗಧಿತ ಶುಲ್ಕವನ್ನು ಪಾವತಿಸಿ ನೊಂದಣಿಯನ್ನು ಈಜು ಕೊಳದಲ್ಲಿಯೇ ಮಾಡಿಕೊಳ್ಳುವುದು. (ಹೆಚ್ಚಿನ ಮಾಹಿತಿಗಾಗಿ ಶ್ರೀ ಜಯಕುಮಾರ್ ಕೆ, ದೂರವಾಣಿ ಸಂಖ್ಯೆ: **8892407462/0821-2419288** ಇವರನ್ನು ಸಂಪರ್ಕಿಸುವುದು).

ಮೇಲಿನ ವಿಷಯವನ್ನು ತಮ್ಮ ಪ್ರತಿಷ್ಠಿತ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.

ನಿರ್ದೇಶಕರು

Scanned with OKEN Scanner